**ಶ್ರೀ ವೈಜನಾಥ್ ಪಾಟೀಲ್ :** ಮಾನ್ಯ ಅಧ್ಯಕ್ಷರೆ, ಆ ಮಕ್ಕಳು ಎಲ್ಲಿಗೆ ಹೋದವು, ಎಂಬ ಬಗ್ಗೆ ತಿಳಿಸಬೇಕೆಂದು ಕೇಳುತ್ತೇನೆ. ಮತ್ತೆ ಪ್ಯಾಕೇಜ್ ಕೊಟ್ಟಿರುವ ಬಗ್ಗೆ ತಿಳಿಸಬೇಕು. ಹಿಂದುಳಿದ ಪ್ರದೇಶ ಆಗಿದೆ. ಅದಕ್ಕೆ ಮಾನ್ಯ ಎಸ್.ಎಂ. ಕೃಷ್ಣರವರ ಕಾಲದಲ್ಲಿ 10 ಕೋಟಿ ರೂಪಾಯಿಗಳನ್ನು ರಿಲೀಫ್ ಫಂಡ್ ಎಂದು ಕೊಟ್ಟಿದ್ದರು. ಅದರ ಬಗ್ಗೆ ಇತ್ತೀಚಿನ ವರದಿ ಏನು ಇಲ್ಲ.

**ಅಧ್ಯಕ್ಷರು :** ಮಾನ್ಯ ಮುಖ್ಯಮಂತ್ರಿಯವರೆ, ಇದಕ್ಕೆ ಉತ್ತರವನ್ನು ಹೇಳುತ್ತೀರಾ?

**ಶ್ರೀ ಎಂ.ಕೆ. ಸೋಮಶೇಖರ್ :** ಮಾನ್ಯ ಅಧ್ಯಕ್ಷರೆ, ನಾನು ಮೈಸೂರಿನಲ್ಲಿ ನೀರಿನ ಬಗ್ಗೆ ಕೇಳಿದ್ದೆ.

**ಅಧ್ಯಕ್ಷರು :** ತಾವು ಕೇಳಿದ್ದೀರಿ. ನಾನು ನಿಮ್ಮನ್ನು ಕರೆದಾಗ ಎಲ್ಲಿಗೆ ಹೊರಟು ಹೋಗಿದ್ದೀರಿ?

**ಮುಖ್ಯಮಂತ್ರಿ :** ಮಾನ್ಯ ಅಧ್ಯಕ್ಷರೆ, 2001ರಲ್ಲಿ ಆದಂತಹ ಪ್ರಕರಣದಲ್ಲಿ ಆ ಮಕ್ಕಳುಗಳನ್ನು ಅವರ ಕುಟುಂಬಗಳಿಗೆ ವಾಪಸ್ಸು ಕಳುಹಿಸುವಂತಹ ವ್ಯವಸ್ಥೆ ಆಗಿದೆ, ಇದರ ಬಗ್ಗೆ ಸಿಒಡಿ ತನಿಖೆಯನ್ನು ಮಾಡಿ, ಆ ಮಕ್ಕಳನ್ನು ಅವರ ಕುಟುಂಬಗಳಿಗೆ ವಾಪಸ್ಸು ಕಳುಹಿಸಿದ್ದಾರೆ.

**ಶ್ರೀ ವೈಜನಾಥ ಪಾಟೀಲ್ :** ಮಾನ್ಯ ಅಧ್ಯಕ್ಷರೆ, ಸುಳ್ಳು ವರದಿಯನ್ನು ಕೊಡುತ್ತಿದ್ದಾರೆ.

**ಅಧ್ಯಕ್ಷರು :** ಮಾನ್ಯ ವೈಜನಾಥ್ ಪಾಟೀಲ್‌ರವರೆ, ತಾವು ಎರಡು, ಮೂರು ಬಾರಿ ಉಪ ಪ್ರಶ್ನೆಗಳನ್ನು ಕೇಳಿದ್ದೀರಿ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಹೇಳಿದ್ದಾರೆ.

**ಶ್ರೀ ವೈಜನಾಥ ಪಾಟೀಲ್ :** ಮಾನ್ಯ ಅಧ್ಯಕ್ಷರೆ, ಸುಳ್ಳು ವರದಿಯನ್ನು ಕೊಡುತ್ತಿದ್ದಾರೆ. ಅವರು ವಾಪಸ್ಸು ಕೊಟ್ಟಿರುವ ರಿಪೋರ್ಟ್ ಎಲ್ಲಿ ಇದೆ? ಇಲ್ಲ. ದಯಮಾಡಿ ತಿಳಿಸಬೇಕು. ಯಾರಿಗೆ ವಾಪಸ್ಸು ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು.

**ಅಧ್ಯಕ್ಷರು :** ಆಯಿತು, ಕುಳಿತುಕೊಳ್ಳಿ.

**8. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:**

**ವಿಷಯ:** ಮೈಸೂರು ನಗರದಲ್ಲಿನ ನೀರಿನ ಸಮಸ್ಯೆಯ ಬಗ್ಗೆ.

**ಶ್ರೀ ಎಂ.ಕೆ. ಸೋಮಶೇಖರ್ (ಕೃಷ್ಣರಾಜ) :** ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿ ನೀರಿನ ಸಮಸ್ಯೆ ಬಹಳ ಹೆಚ್ಚಾಗಿದೆ. ಕೆ.ಆರ್.ಎಸ್. ಪಕ್ಕದಲ್ಲಿದ್ದರೂ, ಅಲ್ಲಿ ಸಾಕಷ್ಟು ನೀರಿದ್ದರೂ ಕೂಡ ಮೈಸೂರಿನವರಿಗೆ ನೀರು ದೊರೆಯುತ್ತಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ.

**ಅಧ್ಯಕ್ಷರು :** ಈ ವಿಷಯವನ್ನು ನೀವು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು. ಆಗ ನಾನು ನಿಮ್ಮನ್ನು ಕರೆದಾಗ ನೀವು ಇರಲಿಲ್ಲ. ಈಗ ಕೇಳುತ್ತಿದ್ದೀರಿ. ಇದರ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ಹೇಳಿ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ಮೈಸೂರು ನಗರಕ್ಕೆ ಕುಡಿಯುವ ನೀರನ್ನು ಕೃಷ್ಣರಾಜ ಸಾಗರ ಈ ಕೆಳಕಂಡ ಸ್ಥಳಗಳಿಂದ ಪಡೆಯಲಾಗುತ್ತಿದೆ. ಅವುಗಳ ವಿವರ ಕೆಳಕಂಡಂತಿದೆ:

| ಕ್ರ.ಸಂ. | ಯೋಜನೆಯ ಹೆಸರು | ವಿನ್ಯಾಸದ ಸಾಮರ್ಥ್ಯ | ಹಾಲಿ ಸಾಮರ್ಥ್ಯ |
|---|---|---|---|
| 1. | ಹೊಂಗಳಿ ನೀರಿನ ಯೋಜನೆ | 20 ಎಂ.ಜಿ.ಡಿ. | 14.36 ಎಂ.ಜಿ.ಡಿ. |
| 2. | ಬೆಳಗೊಳ ನೀರಿನ ಯೋಜನೆ | 11.5. ಎಂ.ಜಿ.ಡಿ. | 9.06 ಎಂ.ಜಿ.ಡಿ. |
| 3. | ಮೇಳಾಪುರ ನೀರಿನ ಯೋಜನೆ | 11 ಎಂ.ಜಿ.ಡಿ. | 9.50 ಎಂ.ಜಿ.ಡಿ. |

ಈ ಮೇಲಿನ ಮೂರು ಯೋಜನೆಗಳಲ್ಲಿ ಕ್ರ.ಸಂ. (1) ಮತ್ತು (2)ರ 2 ಯೋಜನೆಗಳು ಬಹಳ ಹಳೆಯ ಯೋಜನೆಗಳಾಗಿವೆ. ಮೂಲ ವಿನ್ಯಾಸದ ಪ್ರಕಾರ ನಗರಕ್ಕೆ 42.5 ಎಂ.ಜಿ.ಡಿ. ನೀರನ್ನು ಪಡೆಯಲು ಉದ್ದೇಶಿಸಲಾಗಿತ್ತು. ಆದರೆ ಯಂತ್ರಗಳು ಹಳೆಯದಾಗಿದ್ದು ಮತ್ತು ಸಾಗಾಣೆ ಪೈಪುಗಳಲ್ಲಿ ಸಾಮರ್ಥ್ಯ ಕಡಿಮೆಯಾಗಿದೆ. ಈಗ ನಗರಕ್ಕೆ ಈ ಯೋಜನೆಗಳಿಂದ 32.92 ಎಂ.ಜಿ.ಡಿ. ನೀರನ್ನು ಮಾತ್ರ ಪಡೆಯಲಾಗುತ್ತಿದೆ. ಇದರ ಜೊತೆಗೆ ಪ್ರತಿನಿತ್ಯ ಉಂಟಾಗುವ ವಿದ್ಯುತ್ ವ್ಯತ್ಯಯದಿಂದ ಸಂಗ್ರಹಣೆಗೊಳ್ಳುವ ನೀರು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ.

ಮೈಸೂರು ನಗರದಲ್ಲಿ ಸುಮಾರು 10 ಲಕ್ಷ ಜನಸಂಖ್ಯೆ ಇದ್ದು, ಪ್ರತಿ ವರ್ಷ ಹೊಸ ಬಡಾವಣೆಗಳು ನಗರಪಾಲಿಕೆ ವ್ಯಾಪ್ತಿಗೆ ಸೇರ್ಪಡೆಯಾಗುತ್ತಿವೆ. ಈಗ ನಗರಕ್ಕೆ 32.92 ಎಂ.ಜಿ.ಡಿ. ನೀರನ್ನು ಪಡೆದುಕೊಂಡು ನೀರು ಸರಬರಾಜು ಮಾಡಲಾಗುತ್ತಿದೆ. ಇದರ ಜೊತೆಗೆ, ನಗರದಲ್ಲಿ 857 ಸಂಖ್ಯೆ ಕೈ ಪಂಪು, ಬೋರ್‌ವೆಲ್‌ಗಳು ಹಾಗೂ 625 ಸಂಖ್ಯೆಯ ವಿದ್ಯುತ್ ಚಾಲಿತ ಮೋಟಾರುಗಳು ಅಳವಡಿಸಿದ ಬೋರ್‌ವೆಲ್‌ಗಳಿಂದ ನೀರನ್ನು ಪಡೆಯಲಾಗುತ್ತಿದೆ.

ಹೊಸ ಬಡಾವಣೆಗಳಿಗೆ ಮತ್ತು ನೀರಿನ ಕೊರತೆ ಕಾಣಿಸಿಕೊಂಡ ಪ್ರದೇಶಗಳಿಗೆ 10 ನೀರಿನ ಟ್ಯಾಂಕರುಗಳ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಬೇಸಿಗೆ ಕಾಲದಲ್ಲಿ ನೀರಿನ ಬೇಡಿಕೆ ಹೆಚ್ಚಾಗುತ್ತಿದ್ದು, ಹಾಲಿ ಇರುವ ನೀರನ್ನು ಬೇಡಿಕೆಗೆ ತಕ್ಕಂತೆ ಒದಗಿಸಲು ಸಾಧ್ಯವಾಗುತ್ತಿಲ್ಲ. ಪ್ರತಿ ವರ್ಷವೂ ಬೇಸಿಗೆಯಲ್ಲಿ ಅದರಲ್ಲೂ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಿನಲ್ಲಿ ಈ ಸಮಸ್ಯೆ ತಲೆದೋರುತ್ತಿದ್ದು, ಇದನ್ನು ಸಮರ್ಥವಾಗಿ ಎದರಿಸಲು ಮೈಸೂರು ಮಹಾನಗರ ಪಾಲಿಕೆಯು ಕ್ರಮ ಕೈಗೊಂಡಿದೆ. ಪ್ರತಿ ವರ್ಷವು ನಗರದಲ್ಲಿ ಏಪ್ರಿಲ್‌ನಿಂದ ನೀರನ್ನು ದಿನ ಬಿಟ್ಟು ದಿನ (Alternative days) ಸರಬರಾಜು ಮಾಡುವ ವ್ಯವಸ್ಥೆ ಮಾಡಲಾಗಿದೆ. ಈ ಬಾರಿಯೂ ನಗರಕ್ಕೆ ಬೇಸಿಗೆ ಕಳೆಯುವವರೆಗೆ ನೀರನ್ನು ದಿನ ಬಿಟ್ಟು ದಿನ ಸರಬರಾಜು ಮಾಡಲು ಏಪ್ರಿಲ್ 1 ರಿಂದ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ಸಮರ್ಪಕವಾಗಿ ನೀರನ್ನು ದಿನ ಬಿಟ್ಟು ದಿನ ಹೆಚ್ಚು ಒತ್ತಡದಲ್ಲಿ ಸರಬರಾಜು ಮಾಡಲಾಗುತ್ತಿದೆ. ಇದರ ಜೊತೆಗೆ ಬೇಸಿಗೆಯಲ್ಲಿ ನೀರಿನ ಹೆಚ್ಚು ಬೇಡಿಕೆಯನ್ನು

ಪೂರೈಸಲು, ಅದರಲ್ಲೂ ಹೊಸ ಬಡಾವಣೆಗಳಿಗೆ ಹೆಚ್ಚಿನ ನೀರನ್ನು ಟ್ಯಾಂಕರುಗಳ ಮೂಲಕ ಸರಬರಾಜು ಮಾಡಲಾಗುವುದು. ಈ ವ್ಯವಸ್ಥೆಯು ಮುಂದೆ ಮಳೆಗಾಲ ಪ್ರಾರಂಭವಾಗುವವರೆಗೆ ಮುಂದುವರಿಸಲಾಗುವುದು.

ನಗರಕ್ಕೆ ನೀರಿನ ಕೊರತೆಯನ್ನು ನಿವಾರಿಸಲು ಮೇಳಾಪುರ 2ನೇ ಹಂತವನ್ನು ಪ್ರಾರಂಭಿಸಲು ಸರ್ಕಾರ ಅನುಮೋದನೆ ನೀಡಿದ್ದು, ಈಗಾಗಲೇ ಕಾಮಗಾರಿ ಪ್ರಾರಂಭಿಸಲಾಗಿದೆ. ಡಿಸೆಂಬರ್ 2006 ರ ಅಂತ್ಯಕ್ಕೆ ಈ ಕಾಮಗಾರಿ ಮುಕ್ತಾಯಗೊಳ್ಳಲಿದೆ. ಈ ಯೋಜನೆ ಪೂರ್ಣಗೊಂಡ ನಂತರ ಮೈಸೂರು ನಗರದ ಜನರಿಗೆ ಸಾಕಷ್ಟು ನೀರು ಲಭ್ಯವಾಗುತ್ತದೆ.

**ಶ್ರೀ ಎಂ.ಕೆ. ಸೋಮಶೇಖರ್** : ಮಾನ್ಯ ಅಧ್ಯಕ್ಷರೇ, ಮೈಸೂರು ನಗರಕ್ಕೆ 42.5 ಎಂ.ಜಿ.ಡಿ. ನೀರನ್ನು ಪಡೆಯಲು ಉದ್ದೇಶಿಸಲಾಗಿದ್ದರೂ, ಅದರಲ್ಲಿ ಸುಮಾರು 10 ಎಂ.ಜಿ.ಡಿ. ನೀರು ಕಡಿಮೆಯಾಗಿ 32.92 ಎಂ.ಜಿ.ಡಿ. ನೀರು ಬರುತ್ತಿದೆ ಎಂದು ಹೇಳಿದ್ದಾರೆ. ಆದರೆ ಮೈಸೂರು ನಗರಕ್ಕೆ ಎಷ್ಟು ನೀರು ಬರುತ್ತಿದೆ ಎಂದು ತಿಳಿದುಕೊಳ್ಳಲು ಯಾವುದೇ ಒಂದು ಗೇಜ್ ಇಲ್ಲ. ಅದಕ್ಕೆ ಯಾವುದೇ ಒಂದು ಅಳತೆಗೋಲು ಇಲ್ಲ. ಏನೋ ಒಂದು ಕ್ರೂಡ್ ಲೆಕ್ಕಾಚಾರದಲ್ಲಿ ಹೇಳುತ್ತಿದ್ದಾರೆ. ಮೊನ್ನೆ ಕೂಡ ಪರಿಶೀಲನೆ ಮಾಡಿದಾಗ, ಯಾವುದೇ ರೀತಿಯ ಅಳತೆಗೋಲಿಲ್ಲ, ಎಷ್ಟು ನೀರು ಬರುತ್ತಿದೆ ಎಂದು ನಮಗೂ ಗೊತ್ತಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಹಿಂದೆ ಪ್ರತಿನಿತ್ಯವೂ ನೀರನ್ನು ಕೊಡುತ್ತಿದ್ದರು. ಕಳೆದ ವರ್ಷದ ಬೇಸಿಗೆಯಲ್ಲಿ ಮಾತ್ರ ನೀರನ್ನು ದಿನ ಬಿಟ್ಟು ದಿನ ಕೊಡುತ್ತಿದ್ದರು. ಇದಕ್ಕೆ ಕಾರಣವೆಂದರೆ, ದೇವರಾಯನ ನಾಲೆ ಸೇತುವೆ ದುರಸ್ತಿಯಾಗುತ್ತಿತ್ತು. ದುರಸ್ತಿಯಾದ ಮೇಲೆ ಪ್ರತಿನಿತ್ಯ ನೀರನ್ನು ಕೊಡುತ್ತೇವೆ ಎಂದು ಹೇಳಿ, ದುರಸ್ತಿಯಾಗುತ್ತಿದ್ದ ಕಾರಣಕ್ಕೋಸ್ಕರ ದಿನಬಿಟ್ಟು ದಿನ ನೀರನ್ನು ಕೊಡುತ್ತಿದ್ದರು. 32 ಎಂ.ಜಿ.ಡಿ. ನೀರು ಬರುತ್ತಿದೆ ಎಂದು ಏನು ಹೇಳುತ್ತಿದ್ದಾರೆ, ಅದು ನಿರಂತರವಾಗಿ ಬರುತ್ತಲೇ ಇದೆ. ನೀರು ಎಲ್ಲೂ ಕಡಿಮೆಯಾಗಿಲ್ಲ. ಕೆ.ಆರ್.ಎಸ್. ನಲ್ಲಿ ಕೂಡ ನೀರು ಕಡಿಮೆಯಾಗಿಲ್ಲ. ಕೆ.ಆರ್.ಎಸ್. ನಲ್ಲಿ 65 ಅಡಿ ನೀರಿದ್ದಾಗಲೂ ಕೂಡ ಬೇಸಿಗೆ ಕಾಲದಲ್ಲಿ ಪೂರ್ಣವಾಗಿ ಎಲ್ಲರಿಗೂ ನೀರು ಕೊಟ್ಟಿದ್ದರು. ಈಗ ಕೆ.ಆರ್.ಎಸ್. ನಲ್ಲಿ 103 ಅಡಿ ನೀರಿದ್ದರೂ ಕೂಡ, ಈ ಸಲ ದಿನಬಿಟ್ಟು ದಿನ ನೀರನ್ನು ಕೊಡಲು ಪ್ರಾರಂಭ ಮಾಡಿದ್ದಾರೆ. ಇದೆಲ್ಲವೂ, ಅಲ್ಲಿ ನೀರನ್ನು ವಿತರಣೆ ಮಾಡುತ್ತಿರುವಂಥ ಅಧಿಕಾರಿಗಳ ಕೈವಾಡವೇ ಹೊರತು ಅಲ್ಲಿ ನೀರಿನ ಸಮಸ್ಯೆಯಿಲ್ಲ. ನೀರನ್ನು ಸರಿಯಾಗಿ ವಿತರಣೆ ಮಾಡದಿರಲು ಇವರಲ್ಲಿರತಕ್ಕಂಥ ಇನ್‌ಎಫಿಷಯೆನ್ಸಿ ಮತ್ತು ಕುತಂತ್ರಗಳೇ ಕಾರಣ. ದಿನಗಟ್ಟಲೆ ಲೆಕ್ಕಾಚಾರವಿಲ್ಲದಂತೆ, ನೂರಾರು ಲಾರಿಗಳಲ್ಲಿ ನೀರನ್ನು ಪ್ರೈವೇಟ್‌ನವರಿಗೆ ಕೊಡುತ್ತಿದ್ದಾರೆ. ಹಿಂದೆ ಅಲ್ಲಿ ಒಬ್ಬರೇ ಒಬ್ಬರು ಅಧಿಕಾರಿಯಿದ್ದು, ಇಡೀ ಮೈಸೂರು ನಗರಕ್ಕೆ ಯಾವುದೇ ತೊಂದರೆಯಿಲ್ಲದಂತೆ ನೀರನ್ನು ಕೊಡುತ್ತಿದ್ದರು. ಈಗ ಅಲ್ಲಿ ಸುಮಾರು 35 ಜನ ಇಂಜಿನಿಯರುಗಳಿದ್ದಾರೆ. ಮೊದಲು ಆರೇಳು ಜನ

ಇಂಜಿನಿಯರುಗಳು ಮಾಡುತ್ತಿದ್ದಂಥ ಕೆಲಸವನ್ನು ಇವತ್ತು 35 ಜನ ಇಂಜಿನಿಯರುಗಳು ಮಾಡುತ್ತಿದ್ದರೂ ಇವತ್ತು ನೀರಿನ ಸಮಸ್ಯೆ ಜಾಸ್ತಿಯಾಗಿದೆ. ನೀರನ್ನು ದಿನಬಿಟ್ಟು ದಿನ ಕೊಡಲು ಯಾವುದೇ ಕಾರಣವಿಲ್ಲ. ಮಾರ್ಚ್ ಎಂಡ್‌ವರೆಗೆ ಕೊಡುತ್ತಿದ್ದಂಥಾದ್ದಕ್ಕೂ ಮತ್ತು ಈಗ ಏಪ್ರಿಲ್ 1 ರಿಂದ ನೀರು ಬರುತ್ತಿರತಕ್ಕಂಥಾದ್ದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಹೀಗಾಗಿ, ಅವರು ದಿನಬಿಟ್ಟು ದಿನ ನೀರನ್ನು ಕೊಡಲಿಕ್ಕೆ ಕಾರಣವಿಲ್ಲ. ಕಳೆದ ಬಾರಿ ಸೇತುವೆ ರಿಪೇರಿಯಲ್ಲಿದ್ದುದರ ಕಾರಣಕ್ಕೋಸ್ಕರ ದಿನಬಿಟ್ಟು ದಿನ ನೀರು ಕೊಡುವುದನ್ನು ಮಾಡಿದ್ದರು. ಇಲ್ಲಿಂದ ಅಧಿಕಾರಿಗಳಾದರೂ ಬಂದು ಸಭೆಯನ್ನು ಮಾಡಿ ಅವರಿಗೆ ಹೇಳಬೇಕು. ಅಲ್ಲಿ ಇವತ್ತು ಯಾರೂ ಹೇಳುವವರು, ಕೇಳುವವರು ಇಲ್ಲ. ಯಾರ ಮಾತನ್ನೂ ಕೇಳುತ್ತಿಲ್ಲ. ಅಧಿಕಾರಿಗಳನ್ನು ಬಿಗಿ ಮಾಡಬೇಕು. ವಾಟರ್ ಬೋರ್ಡ್‌ನವರೋ ಅಥವಾ ಸೆಕ್ರೆಟರಿ ಲೆವೆಲ್‌ನ ಅಧಿಕಾರಿಗಳೋ ಅಲ್ಲಿಗೆ ಬಂದು ಸಭೆ ಮಾಡಿ ಅಲ್ಲಿರುವವರಿಗೆ ಸರಿಯಾದಂಥ ನಿರ್ದೇಶನ ಕೊಟ್ಟರೆ ಪ್ರತಿನಿತ್ಯ ನೀರನ್ನು ಕೊಡಬಹುದು. ದಿನಬಿಟ್ಟು ದಿನ ನೀರು ಕೊಡಲಿಕ್ಕೆ ಯಾವುದೇ ಕಾರಣವಿಲ್ಲ. ದಯಮಾಡಿ ಇಲ್ಲಿಂದ ಅಧಿಕಾರಿಗಳು ಅಲ್ಲಿಗೆ ಬಂದು ಒಂದು ಸಭೆ ನಡೆಸಿ ಅವರಿಗೆ ಬಿಗಿಯಾದಂಥ ನರ್ದೇಶನ ಕೊಟ್ಟು ಪ್ರತಿನಿತ್ಯ ನೀರು ಕೊಡಲಿಕ್ಕೆ ವ್ಯವಸ್ಥೆ ಮಾಡಿಕೊಡಬೇಕು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ತನ್ವೀರ್‌ಸೇಠ್ (ನರಸಿಂಹರಾಜ)** : ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರಾದಂಥ ಸೋಮಶೇಖರ್‌ರವರು ಮೈಸೂರು ನಗರದಲ್ಲಿನ ನೀರಿನ ಸಮಸ್ಯೆಯ ಬಗ್ಗೆ ಸರ್ಕಾರದ ಗಮನ ಸೆಳೆದಿರುವುದು ಸರಿಯಾಗಿದೆ. ಈ ಹಿಂದೆ, ಹಳೆಯ ಮೈಸೂರು ಭಾಗಕ್ಕೆ ಬರುತ್ತಿದ್ದಂಥ ನೀರು ಅಂದರೆ 1936ನೇ ಇಸವಿಯಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರು ನಗರಕ್ಕೆ ಪ್ರಥಮ ಬಾರಿಗೆ ಕಾವೇರಿ ನೀರಿನ ಮೊದಲನೇ ಹಂತದ ನೀರು ಸರಬರಾಜಿನಲ್ಲಿ ಮೈಸೂರು ನಗರಕ್ಕೆ ಕಾವೇರಿ ನೀರನ್ನು ತಂದಂಥ ಸಂದರ್ಭದಲ್ಲಿ ಮೈಸೂರು ನಗರದ ಜನಸಂಖ್ಯೆ ಕೇವಲ 75 ಸಾವಿರವಾಗಿತ್ತು. 1956ನೇ ಇಸವಿಯವರೆಗೂ ಮೈಸೂರು ನಗರದಲ್ಲಿ ಯಾವುದೇ ರೀತಿಯಲ್ಲಿ ನೀರಿನ ಸಮಸ್ಯೆ ಇಲ್ಲದಂತೆ ನಡೆಯುತ್ತಿತ್ತು. 1996–97ನೇ ಇಸವಿಯವರೆಗೂ ಒಬ್ಬ ಎಕ್ಸಿಕ್ಯುಟಿವ್ ಇಂಜಿನಿಯರ್ ಎಲ್ಲ ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗುತ್ತಿದ್ದ. ಇವತ್ತು ಸುಮಾರು 13 ಜನ ಇಂಜಿನಿಯರುಗಳನ್ನು ನಾವು ಅಲ್ಲಿ ಹಾಕಿದ್ದೇವೆ. ಆದರೂ ಸಹ, ಸೋಮಶೇಖರ್‌ರವರು ಹೇಳಿದಂತೆ, ಮೈಸೂರು ನಗರಕ್ಕೆ ಜನಸಂಖ್ಯೆಗನುಗುಣವಾಗಿ ಬೇಕಾಗಿರುವಂಥ ನೀರಿನ ಪ್ರಮಾಣವೆಷ್ಟು, ಎಷ್ಟು ನೀರು ಬರುತ್ತಿದೆ ಎನ್ನುವುದನ್ನು ಮೆಷರ್ ಮಾಡುವಂಥ ಎಕ್ವಿಪ್‌ಮೆಂಟ್ಸ್ ಇಲ್ಲದಿರುವ ಹಿನ್ನಲೆಯಲ್ಲಿ ಬೇಕಾಬಿಟ್ಟಿಯಾಗಿ ನೀರನ್ನು ಕೊಡುತ್ತಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ 32.92 ಎಂ.ಜಿ.ಡಿ. ನೀರು ಮೈಸೂರು ನಗರಕ್ಕೆ ಬರುತ್ತದೆ ಎಂದು ಹೇಳಿದ್ದಾರೆ. ಅಲ್ಲದೇ, ಸುಮಾರು 800ಕ್ಕೂ ಹೆಚ್ಚು

ಬೋರ್‌ವೆಲ್‌ಗಳೂ ಕೆಲಸ ಮಾಡುತ್ತಿವೆ. ಅವುಗಳಿಂದ ಬರುತ್ತಿರುವ ನೀರಿನ ಪ್ರಮಾಣವೆಷ್ಟು ಎನ್ನುವುದನ್ನು ಇಲ್ಲಿ ತೋರಿಸಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯತೆಯಿಂದ ಈ ಸಮಸ್ಯೆ ಇನ್ನೂ ಹೆಚ್ಚಿನ ಸ್ವರೂಪವನ್ನು ಪಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ಕಾರಣಕ್ಕಾಗಿ, ಮಾನ್ಯ ಮುಖ್ಯಮಂತ್ರಿಗಳ ಹಾಗೂ ಸರ್ಕಾರದ ಗಮನಕ್ಕೆ ತರುವುದೇನೆಂದರೆ, 8–10 ವರ್ಷದ ಹಿಂದೆ ನೀರಿನ ಸಮಸ್ಯೆಯಿದ್ದರೂ, ಬೇಸಿಗೆಯ ಕಾಲಗಳಲ್ಲಿ ಮೈಸೂರು ನಗರಕ್ಕೆ ಯಾವುದೇ ರೀತಿಯಲ್ಲಿ ನೀರಿನ ತೊಂದರೆಯಾಗಿರಲಿಲ್ಲ. ಆದರೆ ಇವತ್ತು ಉತ್ತಮವಾಗಿ ಮಳೆ ಬಿದ್ದಿದ್ದು, ನೀರಿನ ಪ್ರಮಾಣ ಹೆಚ್ಚಿದ್ದು, ಕೆ.ಆರ್.ಎಸ್. ತುಂಬಿದ್ದರೂ ಇವತ್ತು ಅಧಿಕಾರಿಗಳ ಬೇಜವಾಬ್ದಾರಿಯಿಂದ, ಮೈಸೂರು ನಗರದಲ್ಲಿನ ನೀರಿನ ಡಿಸ್ಟ್ರಿಬ್ಯೂಷನ್ ಸಿಸ್ಟಂ ಅನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸದೇ ಇರುವುದರಿಂದ ಇಂಥ ಸಮಸ್ಯೆಗಳು ಬರುತ್ತಿವೆ. ಸರ್ಕಾರ ಈ ಬಗ್ಗೆ ಮಧ್ಯೆ ಪ್ರವೇಶಿಸಿ, ಅಲ್ಲಿ ಒಂದು ಸಭೆಯನ್ನು ಕರೆಯುವುದರ ಮೂಲಕ ನೀರಿನ ಸಮಸ್ಯೆಯನ್ನು ಬಗೆಹರಿಸಲು ಮುಂದಾಗಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :** ಮಾನ್ಯ ಅಧ್ಯಕ್ಷರೇ, ವಾಲ್ವ್ ಮನ್‌ಗಳ ಕೈಚಳಕ ಜಾಸ್ತಿಯಾಗಿದೆ. ಎಲ್ಲೆಲ್ಲಿ ಮನೆ ಕಟ್ಟುತ್ತಿದ್ದಾರೆ, ಅಲ್ಲಿಗೆ ಮಾತ್ರ ನೀರನ್ನು ಕೊಟ್ಟು ಬಿಡುತ್ತಾರೆ. ಅಲ್ಲಿ ವಾಲ್ವನ್ನೇ ತಿರುಗಿಸಿಬಿಡುತ್ತಾರೆ. ಅಲ್ಲಿರತಕ್ಕಂಥ ಇಂಜಿನಿಯರುಗಳೆಲ್ಲಾ ರಾ ಹ್ಯಾಂಡ್ಸ್. ಅವರಿಗೆ ಏನೇನೂ ಗೊತ್ತಿಲ್ಲ. ಇಂಥ ಇಂಜಿನಿಯರುಗಳನ್ನು ಕಟ್ಟಿಕೊಂಡು, ಸಾಂಸ್ಕೃತಿಕ ಹಿನ್ನಲೆ ಇರತಕ್ಕಂಥ ಮೈಸೂರಿನ ಜನರನ್ನು ಸಾಯಿಸುತ್ತಿದ್ದಾರೆ. ಹೊರ ಬಡಾವಣೆಗಳಿಗಂತೂ ನೀರು ಇಲ್ಲವೇ ಇಲ್ಲ. ಅಲ್ಲಿನ ಹೆಂಗಸರುಗಳೆಲ್ಲಾ ಕಂಕುಳಲ್ಲಿ ನೀರಿನ ಕೊಡಗಳನ್ನು ಹೊತ್ತುಕೊಂಡು ಬರುತ್ತಾರೆ. ನಾವು ಮಹಿಳೆಯರಿಗೆ ಮಾನ್ಯತೆ ಕೊಡುತ್ತೇವೆ. ಅಂಥ ಮಹಿಳೆಯ ಕಣ್ಣಿಂದ ಇವತ್ತು ನೀರು ಹರಿಯುತ್ತಿದೆ. 'ಯತ್ರ ನಾರ್ಯಸ್ತು ಪೂಜ್ಯಂತು ರಮರತೇ ಸತ್ರದೇವತಾ' ಎಂದು ಹೇಳುತ್ತೇವೆ. ಅಕ್ಕನಾಗಿ, ತಂಗಿಯಾಗಿ, ಮಡದಿಯಾಗಿ, ಮಹಾಮಾತೆಯಾಗಿ ಜಗತ್ತನ್ನು ರಂಜಿಸುವ ಹೆಣ್ಣು, ಮನುಷ್ಯನ ಬಾಳ್ವೆಯ ಕಣ್ಣು ಎಂದು ಹೇಳುತ್ತೇವೆ. ಆ ಕಣ್ಣು ಇವತ್ತು ಕಣ್ಣೀರು ಹಾಕುತ್ತಿದೆ. ಆ ಕೆಲಸ ಆಗಬಾರದು. ನಿಜಕ್ಕೂ ಕೂಡ ಮಾನ್ಯ ಮುಖ್ಯಮಂತ್ರಿಗಳ ತಾಳ್ಮೆ, ಅವರಲ್ಲಿರತಕ್ಕಂಥ ವಿದ್ವತ್ತನ್ನು ನೋಡಿದಾಗ, ಅವರು ಇದೆಲ್ಲವನ್ನೂ ವಿಚಾರ ಮಾಡಿ, ಆ ಅಧಿಕಾರಿಗಳಿಗೆ ಗದಾ ಪ್ರಹಾರದ ಮಾಡಿ ಎಂದು ಹೇಳುತ್ತಿದ್ದೇನೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ :** ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ನಾನು ಮೈಸೂರಿನಲ್ಲಿ ಸಭೆಯನ್ನು ಕರೆದು, ಚರ್ಚೆಯನ್ನು ಮಾಡಿದಾಗ ಡಿಸ್ಟ್ರಿಬ್ಯೂಷನ್ ಸಿಸ್ಟಂ ವಿಷಯದಲ್ಲಿ ಕೆಲಸವನ್ನು ಮಾಡದೇ ಇರುವುದರಿಂದಲೇ ಈ ಸಮಸ್ಯೆಗಳಾಗಿದೆ ಎನ್ನುವುದು ನನ್ನ ಗಮನಕ್ಕೂ ಬಂದಿದೆ. ಇವತ್ತು ಅಧಿಕಾರಿಗಳು ಕೆಲಸವನ್ನು ನಿರ್ವಹಿಸತಕ್ಕಂಥ ಸಂದರ್ಭದಲ್ಲಿ ಬೇಜವಾಬ್ದಾರಿಯಿಂದ ನಡೆದುಕೊಂಡು, ಸಮರ್ಪಕವಾಗಿ ಕೆಲಸವನ್ನು ಮಾಡುತ್ತಿಲ್ಲ ಎಂಬ ಬಗ್ಗೆ ಈ ಸದನದಲ್ಲಿ ಸದಸ್ಯರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ.

ನಾನು ತಕ್ಷಣವೇ ಈ ವಿಷಯದಲ್ಲಿ ಕ್ರಮವನ್ನು ತೆಗೆದು ಕೊಳ್ಳುತ್ತೇನೆ. ಅಲ್ಲಿ ಡಿಸ್ಟ್ರಿಬ್ಯೂಷನ್ ಕೆಲಸವನ್ನು ಬಹಳ ದಿವಸಗಳಿಂದ ಹಾಗೆ ಉಳಿಸಿಕೊಂಡು ಬಂದಿದ್ದರಿಂದ ಈ ಒಂದು ತೊಂದರೆಯಾಗಿದೆ. ಆ ಡಿಸ್ಟ್ರಿಬ್ಯೂಷನ್ ಕೆಲಸವನ್ನು ಪ್ರಾರಂಭ ಮಾಡಬೇಕು ಎಂದು ನಾನು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಆ ಕಾಮಗಾರಿಗಳನ್ನು ಆದಷ್ಟು ಬೇಗ ಮುಗಿಸತಕ್ಕಂಥಾದ್ದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

**ಅಧ್ಯಕ್ಷರು** : ಈಗ ಮುಂದಿನ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ. ಮಾನ್ಯ ಹಂಪನಗೌಡ ಬಾದರ್ಲಿ ಮತ್ತು ಇತರರು ಹೈದರಾಬಾದ್ ಕರ್ನಾಟಕದ ವಿಷಯದಲ್ಲಿ, ಒಂದು ನೋಟೀಸ್ ಕೊಟ್ಟಿದ್ದಾರೆ.

**ಶ್ರೀ ಶಿವಾನಂದ ಎಸ್. ಪಾಟೀಲ್** : ಹಂಪನಗೌಡ ಬಾದರ್ಲಿರವರು ಕೊಟ್ಟಿರುವ noticeಗೆ ನಾನು ಕೂಡ signatory ಇದ್ದೇನೆ. ನನಗೂ ತಾವು ಮಾತನಾಡಲು ಅವಕಾಶ ಮಾಡಿ ಕೊಡಬೇಕು.

**ಅಧ್ಯಕ್ಷರು** : ಇನ್ನೂ ಎರಡು ಮೂರು calling attention ಇದೆ.

**ಶ್ರೀ ಶಿವಾನಂದ ಎಸ್. ಪಾಟೀಲ್** : ಮಾನ್ಯ ಹಂಪನಗೌಡರದು, ನನ್ನದು ಮತ್ತು ಮಾನ್ಯ ಗೋಪಾಲ ಪೂಜಾರಿಯವರು .....

**ಅಧ್ಯಕ್ಷರು** : ನೀವು ಕೇಳಿದ್ದೀರಿ. ಬೆಳಿಗ್ಗೆ ಮಾನ್ಯ ಖಿರ್ಗೆಯವರು ಪ್ರಸ್ತಾಪ ಮಾಡಿದ ವಿಚಾರದಲ್ಲಿ ದೀರ್ಘವಾಗಿ ಚರ್ಚೆಯಾಗಿದೆ. ಅದೇ ವಿಚಾರವನ್ನು ನೀವು ಪ್ರಸ್ತಾಪ ಮಾಡುವುದಕ್ಕೆ ಕೇಳಿದ್ದೀರಿ. ಮತ್ತೆ ಅದನ್ನು ಪ್ರಸ್ತಾಪ ಮಾಡುವ ಅಗತ್ಯವಿಲ್ಲ. ಈಗ ಮಾನ್ಯ ಎಂ.ವೈ. ಪಾಟೀಲರು ಪ್ರಸ್ತಾಪ ಮಾಡಿ.

**9. ಗಮನ ಸೆಳೆಯುವ ಸೂಚನೆಗಳು**

**(ಅ) ವಿಷಯ: ಗುಲ್ಬರ್ಗಾ ಜಿಲ್ಲೆಯ ಅಫಜಲಪುರ – ಹೊಸೂರು ರಸ್ತೆಯನ್ನು ಅಭಿವೃದ್ಧಿಪಡಿಸುವ ಕುರಿತು.**

**ಶ್ರೀ ಎಂ.ವೈ. ಪಾಟೀಲ್ (ಅಫಜಲಪುರ)** : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಅಫಜಲಪುರ–ಹೊಸೂರು ರಸ್ತೆಯನ್ನು ಮೇಲ್ದರ್ಜೆಗೇರಿಸಿ ರಾಜ್ಯ ಹೆದ್ದಾರಿಯೆಂದು ಘೋಷಣೆ ಮಾಡಿ 18 ವರ್ಷಗಳಾದವು. ಈ ರಸ್ತೆ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ತಾಲ್ಲೂಕಿಗೆ ಇದು ಒಂದೇ ಮುಖ್ಯ ರಸ್ತೆ ಇರುವಂಥದ್ದು. ಇದು ಮಹಾರಾಷ್ಟ್ರ, ಬಿಜಾಪುರ ಮತ್ತು ಬೆಳಗಾಂ ಭಾಗಕ್ಕೆ ಹೋಗುವ ಏಕೈಕ ಪ್ರಮುಖ ರಸ್ತೆಯಾಗಿದ್ದು ಈ ರಸ್ತೆ ಮೇಲೆ ವಾಹನ ಒತ್ತಡ ಬಹಳಷ್ಟು ಇದೆ. ಈ ರಸ್ತೆಯು ರಾಜ್ಯದ ಹೆದ್ದಾರಿಯಾಗಿದ್ದರೂ ಕೂಡ ಏಕಮುಖವಾಗಿದೆ. ಅಲ್ಲದೆ 6 ಕಿ.ಮೀ. ರಸ್ತೆ ಡಾಂಬರೀಕರಣವಾಗದೆ ಉಳಿದು ಜೆಲ್ಲಿ ರಸ್ತೆ ಮಾತ್ರವಾಗಿದೆ. ತಗ್ಗು ಗುಡ್ಡೆಗಳಂತೂ ವಿಪರೀತವಾಗಿದೆ. ಈ ರಸ್ತೆಯು ರೈತರು ನೇಗಿಲು ಹೂಳಿದ ಜಮೀನಿನಂತಿದೆ. ಈ ರಸ್ತೆಯಲ್ಲಿ ಓಡಾಟ ಮಾಡುವ ಜನರು ಶಾಪವನ್ನು ಹಾಕುತ್ತಿದ್ದಾರೆ ಮತ್ತು ಈ ರಸ್ತೆಯ ದುರಸ್ತಿಗಾಗಿ ಅನೇಕ ಸಂಘಟನೆಗಳು ಹೋರಾಟಕ್ಕೆ ಇಳಿದಿದ್ದಾರೆ. ಈಗ ಕೆಲವೊಂದು ಸಂಘಟನೆಗಳು ಸರದಿ ಉಪವಾಸ ಕೈಗೊಂಡಿದ್ದಾರೆ.